ಶ್ರೀ ಕೆ. ವಿ. ರವೀಂದ್ರನಾಥಬಾಬು.— ನನ್ನ ಪ್ರಶ್ನೆಗೆ ಉತ್ತರ ಬರಲಿಲ್ಲ ?

ಶ್ರೀ ಜೆ. ಹೆಚ್. ಪಟೇಲ್.— ಮಾನ್ಯ ವಿರೋಧ ಪಕ್ಷದ ಉಪ ನಾಯಕರು ಮಂತ್ತು ಮಾನ್ಯ ಪಾಟೀಲ್ ಅವರು ಕೇಳಿದ ಪ್ರಶ್ನೆಗಳಿಗೆ ನಾನು ಈಗಾಗಲೇ ಉತ್ತರ ಕೊಟ್ಟಿದ್ದೇನೆ. ಆದರಿಂದ ಅವರಿಗೆ ಸಮಾಧಾನವಾಗಿದೆ. ಆದರೂ ಸಹ ಇದನ್ನು ಯಾವಾಗ ಮಾಡುತ್ತೀರಿ ಎಂದು ಕೇಳಿದರೆ ಹೇಗೆ ? ಲೋಕ ಸಭೆಯಲ್ಲಿಯಾಗಲೀ ಆಥವಾ ಹೌಸ್ ಆಫ್ ಕಾಮನ್ಸ್‌ನಲ್ಲಿಯಾಗಲೀ ಈ ರೀತಿಯಲ್ಲಿ ನಡೆಯುವುದಿಲ್ಲ. ಈ ಕೆಲಸಕ್ಕೆ ಹಣ ಯಾವ ರೀತಿ ಕೊಡುತ್ತೀರಿ ಎಂದು ಕೇಳಿದರೆ ಹೇಗೆ ? ಮಾನ್ಯ ಉಪಾಧ್ಯಕ್ಷರೇ, ತಮ್ಮಲ್ಲಿ ಅತ್ಯಂತ ವಿನಯಪೂರ್ವಕವಾಗಿ ಈ ಬಗ್ಗೆ ಕೇಳಿಕೊಳ್ಳುವುದು ಇಷ್ಟೆ. ಮಾನ್ಯ ಮಂತ್ರಿಗಳು ಇದರ ಬಗ್ಗೆ ಪರಿಶೀಲನೆ ಮಾಡುವುದಾಗಿ ಹೇಳಿದ್ದಾರೆ. ಇದರ ಜೊತೆಗೆ ಹಣದ ತೊಂದರೆ ಏನಾದರೂ ಇದ್ದರೆ, ಯಾವ ಯಾವ ಜಿಲ್ಲೆಗಳಲ್ಲಿ ಈ ಕೆಲಸವನ್ನು ಮೊದಲು ಆದ್ಯತೆಯ ಮೇಲೆ ಪ್ರೈಯಾರಿಟಿ ಕೊಟ್ಟು ಮಾಡಬೇಕು ಎಂಬುದನ್ನು ಸಹ ಯೋಚನೆ ಮಾಡುತ್ತೇವೆಂದು ಹೇಳಿದ್ದಾರೆ. ಮತ್ತೆ ಇನ್ನು ಏನು ಉತ್ತರ ಕೊಡಬೇಕು ?

ಶ್ರೀ ಕೆ. ವಿ. ರವೀಂದ್ರನಾಥಬಾಬು.— ನಾನು ಯಾವಾಗ ಮಾಡುತ್ತೀರಿ ಎಂದು ಕೇಳಲಿಲ್ಲ. ನನ್ನ ಪ್ರಶ್ನೆಗೆ ಉತ್ತರಬೇಕು ಎಂದು ಮಾತ್ರ ಕೇಳಿದೆ.

ಶ್ರೀ ಮೊಹಮದ್ ಮೊಹಿನುದ್ದೀನ್.— ಅದಕ್ಕೆ ಉತ್ತರ ಕೊಟ್ಟಿದ್ದೇನೆ.

ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತದ ಉತ್ಪಾದನೆಗಳ ಗುಣಮಟ್ಟದ ಬಗ್ಗೆ

೨೧೯೯. ಶ್ರೀ ಎಂ. ವೀರಯ್ಯಸ್ವಾಮಿ (ಚಿಂಚೋಳಿ).— ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕೆಮತ್ತು ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಳೆದ ಮೂರು ವರ್ಷಗಳಲ್ಲಿ ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜಂಟ್ಸ್ ಉದ್ಯಮದವರು ತಯಾರಿಸುತ್ತಿರುವ ಉತ್ಪಾದನೆ ಮತ್ತು ಅದರ ಪ್ರಮಾಣವೆಷ್ಟು (ವರ್ಷವಾರು ವಿವರ ನೀಡುವುದು)

ಆ) ಸದರಿ ಅವಧಿಯಲ್ಲಿ ಈ ಉದ್ಯಮಕ್ಕೆ ಆದ ಹಾನಿ ಅಥವಾ ಆ ಭವೆಷ್ಟು (ವರ್ಷವಾರು ವಿವರ ನೀಡುವುದು)

ಇ) ಹಾಲಿ ಕೆಲಸ ಮಾಡುತ್ತಿರುವ ಕಾರ್ಮಿಕ ಹಾಗೂ ಇತರ ಸಿಬ್ಬಂದಿ ವರ್ಗದ ಸಂಖ್ಯೆಯೆಷ್ಟು (ವರ್ಗವಾರು ವಿವರ ನೀಡುವುದು) ಪ್ರತಿ ತಿಂಗಳು ವಿತರಣೆಯಾಗುವ ಸ್ಥಳೀಯ ವಿತರಣೆಗಳೆಷ್ಟು ?

ಈ) ಸದರಿ ಉದ್ಯಮ ಉತ್ಪಾದನಾ ಸಾಮರ್ಥ್ಯವನ್ನು ಪೂರ್ಣವಾಗಿ ವಿನಿಯೋಗಿಸಿ ಕೊಳ್ಳುತ್ತಿದೆಯೇ ?

ಉ) ಹಾಲಿ ಇರುವ ದಾಸ್ತಾನು ಹಾಗೂ ಅದರ ಬೆಲೆ ಎಷ್ಟು ?

ಊ) ಸದರಿ ಉದ್ಯಮವು ಲಾಭ ಪಡೆಯಲು ಸರ್ಕಾರವು ತೆಗೆದುಕೊಂಡ ಕ್ರಮಗಳೇನು ?

ಶ್ರೀ ಜೆ ಹೆಚ್. ಪಟೇಲ್ (ಭಾರಿ ಮತ್ತು ಮಧ್ಯಮ ಕೈಗಾರಿಕೆ ಮತ್ತು ವಿದ್ಯುತ್ ಸಚಿವರು).— ಅ) ಕಳೆದ ಮೂರು ವರ್ಷಗಳ ಉತ್ಪಾದನೆಗಳ ವಿವರ ಈ ಕೆಳಕಂಡಂತಿದೆ.

ಕ್ರ. ಸಂ.	ಉತ್ಪಾದನೆಗಳು	೧೯೮೫-೮೬ (ಮೆ. ಟನ್ನುಗಳಲ್ಲಿ)	೧೯೮೬-೮೭	೧೯೮೭-೮೮ (ತಾತ್ಕಾಲಿಕ)
೦.	ಸೋಪ್ಸ್	೯೭೫.೦೧೩	೧೦೪೭೧.೯೮೮	೯೮೭೧.೭೭೭
೨.	ಡಿಟರ್ಜಂಟ್ಸ್	೩೪೦೦.೧೭೩	೪೭೦೬.೨೪೦	೧೯೩೫.೧೯೯
೩.	ಸ್ಯಾಂಡಲ್‌ವುಡ್ ಆಯಿಲ್	೫೫.೩೯೦	೩೫.೧೬೧	೧೧.೭೪೬
೪.	ಅಗರ ಬತ್ತಿಗಳು	೪೫.೪೬೮	೪೯.೬೧೭	೪೫.೩೮೦
೫.	ಬರ್ಸೇರಾಹಸ್ಪ್ ಆಯಿಲ್	೧.೦೪೬	೧.೯೯೮	—
೬.	ಗ್ಲಿಸರಿನ್	೧೭೭.೨೫೦	೩೫೪.೭೫೦	೨೯೦.೨೫೦
೭.	ಸಿಟ್ರಿಕ್ ಆಸಿಡ್	೧೪೦.೭೬೫	೪೮.೩೭೫	೩೩೩.೯೦೦
೮.	ಫ್ಯಾಟಿ ಆಸಿಡ್	೭೩೮೦.೮೦೮	೬೦೧೯.೧೭೫	೪೪೭೨.೯೫೩

ರೂ. ಲಕ್ಷದಲ್ಲಿ

೧೯೮೫-೮೬	(—)	೬೯೮.೬೨
೧೯೮೬-೮೭	(—)	೬೨೫.೭೬
೧೯೮೭-೮೮	(—)	೫೮೩.೮೪ (ತಾತ್ಕಾಲಿಕ)

ಆ) ಗ್ರೂಪ್	ವರ್ಷ ೧೯೮೪-೮೫	೧೯೮೫-೮೬	೧೯೮೬-೮೭	ಮಾಸಿಕ ವೇಚ್ಚ (ರೂ. ಲಕ್ಷಗಳಲ್ಲಿ) ೧೯೮೪-೮೫	೧೯೮೫-೮೬	೧೯೮೬-೮೭
ಎ	೨೫	೪೧	೪೧	೧೩.೧೪	೧೬.೭೯	೨೨.೩೮
ಬಿ	೪೧	೪೩	೪೪			
ಸಿ	೪೨೦	೪೪೭	೪೪೯			
ಡಿ	೭೩೮	೭೮೨	೭೭೭			
ಒಟ್ಟು	೧೨೨೪	೧೩೧೨	೧೩೦೧			

ಈ) ಇಲ್ಲ.

ಈ) ೩೦-೪-೮೮ರ ದಾಸ್ತಾನಿನ ವಿವರ ಈ ಕೆಳಕಂಡಂತಿದೆ.

ಕ್ರ ಸಂ.	ವಿವರ	ದಾಸ್ತಾನು (ಮೆಟ್ರಿಕ್ ಟನ್‌ನಲ್ಲಿ)	ಮೌಲ್ಯ (ರೂ. ಲಕ್ಷದಲ್ಲಿ)
೧.	ಸೋಪ್ಸ್	೨೨೮೨	೯೪೨.೭೨
೨.	ಡಿಟರ್ಜಂಟ್ಸ್	೯೦೪	೧೧೦.೯೪
೩.	ಸ್ಯಾಂಡಲ್ ವುಡ್ ಆಯಿಲ್	—	೫೮.೪೧
೪.	ಅಗರ ಬತ್ತಿಗಳು	—	೬.೩೫
೫.	ಫ್ಯಾಟಿಕ್ ಆಸಿಡ್	೫೮	೧೩.೮೫
೬.	ಗ್ಲಿಸರಿನ್	೧೯೮	೮೧-೪೮
೭.	ಪೊತ್ತ		೧೨೧೩.೯೫

ಊ) ಸದರಿ ಉದ್ಯಮವು ಲಾಭದಾಯಕವಾಗಿ ನಡೆಯಲು ಮತ್ತು ಉತ್ಪನ್ನಗಳ ಗುಣ ಮಟ್ಟವನ್ನು ಹೆಚ್ಚಿಸಲು ಆಡಳಿತ ವ್ಯವಸ್ಥೆಯನ್ನು ಸುಧಾರಿಸುವಂತೆ ಅನೇಕ ಕ್ರಮಗಳನ್ನು ಕೈಗೊಂಡಿದೆ.

ಶ್ರೀ ಎಂ. ವೀರಯ್ಯಸ್ವಾಮಿ.—ಇದರ ಉತ್ಪಾದನಾ ಸಾಮರ್ಥ್ಯ ಎಷ್ಟು, ಇಲ್ಲಿ ಇಷ್ಟೊಂದು ನಷ್ಟವಾಗಿರುವುದಕ್ಕೆ ಕಾರಣವೇನು ಮತ್ತು ಇಷ್ಟೊಂದು ದಾಸ್ತಾನು ಇರುವುದಕ್ಕೆ ಕಾರಣವೇನೆಂಬುದನ್ನು ತಿಳಿಸುತ್ತೀರಾ ?

ಶ್ರೀ ಜೆ. ಎಚ್. ಪಟೇಲ್.—ಮಾನ್ಯ ಅಧ್ಯಕ್ಷರೇ, ಇದರ ಉತ್ಪಾದನಾ ಶಕ್ತಿಯನ್ನು ನಮ್ಮ ಸರ್ಕಾರ ಅಧಿಕಾರಕ್ಕೆ ಬರುವುದಕ್ಕೆ ಮುಂಚೆಯೇ ೨೬ ಸಾವಿರ ಟನ್‌ಗಳಿಗೆ ಹೆಚ್ಚಿಸಲಾಗಿತ್ತು. ಇದು ಮೊದಲು ೧೦ ಸಾವಿರ ಟನ್‌ಗಳಷ್ಟು ಉತ್ಪಾದನೆ ಮಾಡುವ ಸಾಮರ್ಥ್ಯವನ್ನು ಹೊಂದಿದ್ದಾಗಲೇ ಪೂರ್ಣಪ್ರಮಾಣದಲ್ಲಿ ಉತ್ಪಾದನೆಯನ್ನು ಮಾಡುವುದಕ್ಕೆ ಸಾಧ್ಯವಾಗಿರಲಿಲ್ಲ. ಆದರೂ ಇದರ ಸಾಮರ್ಥ್ಯವನ್ನು ೨೬ ಸಾವಿರ ಟನ್‌ಗಳಿಗೆ ಹೆಚ್ಚಿಸಲಾಯಿತು. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಇದರ ಉತ್ಪಾದನಾ ಸಾಮರ್ಥ್ಯವನ್ನು ವರ್ಷದಿಂದ ವರ್ಷಕ್ಕೆ ಶೇಕಡಾ ೧೦ ರಿಂದ ಶೇಕಡಾ ೧೫ ರವರೆಗೆ ಹೆಚ್ಚು ಮಾಡಿಕೊಂಡು ಬರಲಾಗುತ್ತಿದೆ. ಈಗ ಅಲ್ಲಿ ಹನ್ನೆರಡೂವರೆ ಸಾವಿರ ಟನ್‌ಗಳಷ್ಟು ಉತ್ಪಾದನೆ ಆಗುತ್ತಿದೆ. ಅಂದರೆ ಒಟ್ಟು ಸಾಮರ್ಥ್ಯದಲ್ಲಿ ಹತ್ತಿರ ಹತ್ತಿರ ಶೇಕಡಾ ೫೦ ರಷ್ಟು ಉತ್ಪಾದನೆ ಆಗುತ್ತಿದೆ. ನಮ್ಮ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚು ಮಾಡದಿದ್ದರೆ ಬೇರೆ ಕಂಪನಿಗಳ ಜೊತೆಗೆ ಪೈಪೋಟಿ ಮಾಡುವುದು ಕಷ್ಟವಾಗುತ್ತದೆ ಮತ್ತು ನಮ್ಮ ಸಾಬೂನುಗಳ ಬೆಲೆಯೂ ಜಾಸ್ತಿ ಆಗುತ್ತದೆ. ಆದ್ದರಿಂದ ಹಿಂದಿನಿಂದ ಪ್ರಖ್ಯಾತಿ ಪಡೆದ ಸೋಪಿನ ಉತ್ಪಾದನೆಯನ್ನು ನಾವು ಹೆಚ್ಚು ಮಾಡಿಕೊಂಡು ಬಂದಿದ್ದೇವೆ. ಇದರಿಂದ ನಷ್ಟ ಸಹ ಕಡಿಮೆ ಆಗುತ್ತಿದೆ. ಇಲ್ಲಿ ನಷ್ಟ ಆಗುತ್ತಿರುವುದಕ್ಕೆ ಹಲವಾರು ಕಾರಣಗಳು ಇವೆ. ಈಗ ಗಂಧದ ಎಣ್ಣೆ ಬಳಕೆ ಮಾಡತಕ್ಕಂಥಾದ್ದು ಮತ್ತು ಬೇರೆ ಎಸೆನ್ಸ್ ಉಪಯೋಗ ಮಾಡತಕ್ಕಂಥಾದ್ದು ಪ್ರಪಂಚದಲ್ಲಿ ಬದಲಾವಣೆಯಾಗುತ್ತಿದೆ. ಆದುದರಿಂದ ನಮ್ಮ ಸ್ಯಾಂಡಲ್ ಆಯಿಲ್‌ಗೆ ಕೆಲವು ಲಾಭ ಬರುತಿತ್ತು ಅದು ಕಡಿಮೆಯಾಗಿದೆ. ನಮ್ಮ ಸೋಪಿಗೆ ವಿದೇಶಗಳಲ್ಲಿ ಎಷ್ಟು ವೈಡ್ ಮಾರ್ಕೆಟ್ ಇತ್ತು, ೩-೪ ವರ್ಷಗಳಲ್ಲಿ ಈ ಎರಡು ಸಂಸ್ಥೆಗಳಲ್ಲಿ ಭಿನ್ನಾಭಿಪ್ರಾಯ ಬಂದು ಮಾರಾಟ ಕಡಿಮೆಯಾಗಿ ಲುಕ್ಸಾನಾಗಿದೆ. ಈ ವರ್ಷ ಮಾರಾಟ ಮಾಡತಕ್ಕಂಥ ಎಂ.ಎಸ್.ಐ.ಎಲ್. ಸಂಸ್ಥೆಯನ್ನು ಮತ್ತು ಉತ್ಪಾದನೆ ಮಾಡತಕ್ಕಂಥ ಕೆ.ಎಸ್. ಆಂಡ್ ಡಿ.ಎಲ್. ಸಂಸ್ಥೆಯನ್ನು ಇವೆರಡು ಸಂಸ್ಥೆಗಳನ್ನು ಸರಿಯಾಗಿ ನಿಗದಿಗೊಳಿಸಿದ್ದೇವೆ. ಈ ವಿಷಯವನ್ನು ಮಾನ್ಯ ಸದಸ್ಯರ ಗಮನಕ್ಕೆ ತರುವುದಕ್ಕೆ ಇಚ್ಛೆ ಪಡುತ್ತೇನೆ. ಕಳೆದ ೧-೨-೩ ತಿಂಗಳಲ್ಲಿ ಒಂದು ವ್ಯವಸ್ಥೆ ಮಾಡುತ್ತೇವೆ ಎಂದು ನಿರ್ಧಾರ ಆದಮೇಲೆ ಉತ್ಪಾದನೆ ಜಾಸ್ತಿಯಾಗಿದೆ, ಮಾರಾಟ ಜಾಸ್ತಿಯಾಗಿದೆ

ಇನ್ನು ಒಂದೆರಡು ವರ್ಷಗಳಲ್ಲಿ ನಿವ್ವಳ ಲಾಭ ಮಾಡತಕ್ಕಂಥ ಸ್ಥಿತಿಗೆ ಬರುತ್ತದೆ ಎನ್ನುವ ಮಾತನ್ನು ಹೇಳುತ್ತೇನೆ.

ಶ್ರೀ ಎಂ. ವೀರಯ್ಯಸ್ವಾಮಿ.—ಮಾನ್ಯ ಮಂತ್ರಿಗಳು ಹೇಳಿರುವ ಉತ್ತರದಲ್ಲಿ ವರ್ಷಕ್ಕೆ ಸುಮಾರು ೨೬೮ ಲಕ್ಷ ಸ್ಯಾಲರಿ ಮತ್ತು ಇತರೆ ಖರ್ಚು ಇದೆ. ಇದಲ್ಲದೆ ಇಂಟರೆಸ್ಟ್ ಕೊಡಬೇಕಾದ್ದು ಎಷ್ಟು ಎನ್ನುವುದನ್ನು ಹೇಳಬೇಕು. ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜಂಟ್ ಕಾರ್ಖಾನೆಗೆ ವಿಸಿಟ್ ಕೊಟ್ಟಿಂಥ ಸಂದರ್ಭದಲ್ಲಿ ನನಗೆ ಗೊತ್ತಾಗದಂತೆ ಇಷ್ಟೊಂದು ದಾಸ್ತಾನು ಇರುವುದಕ್ಕೆ ಕಾರಣ ಎಂ.ಎಸ್.ಐ ಎಲ್ ನವರು ಮಾರುತ್ತಾ ಇಲ್ಲ, ಎಂದು, ಅದು ಒಂದೇ ಕಾರಣ. ಈಗಾಗಲೇ ಆ ಇಂಡಸ್ಟ್ರಿಯಲ್ಲಿರಂಥ ಮ್ಯಾನೇಜ್‌ಮೆಂಟ್‌ನವರು ರಿಕ್ವೆಸ್ಟ್ ಮಾಡಿದ್ದಾರೆ. ಮಾರಾಟವನ್ನು ಕಂಪ್ಲೀಟ್ ನವರಿಗೇ ಬಿಟ್ಟುಬಿಟ್ಟರೆ ಸಾಕಷ್ಟು ಲಾಭ ಮಾಡಬಹುದು ಎಂದು. ಮಾರಾಟವನ್ನು ಪೂರ್ತಿಯಾಗಿ ಸರ್ಕಾರದವರು ಅವರಿಗೇ ಏಕೆ ಬಿಟ್ಟುಕೊಡಬಾರದು. ಸೋಪ್ಸ್‌ಗೆ ಸಾಕಷ್ಟು ಡಿಮ್ಯಾಂಡ್ ಇದೆ, ವಿದೇಶಗಳಲ್ಲೂ ಡಿಮ್ಯಾಂಡ್ ಇದೆ ಎನ್ನುವುದು ಗೊತ್ತಿದೆ. ಸರ್ಕಾರ ಇದರಲ್ಲಿ ಏಕೆ ಹಿಂದೇಟು ಹಾಕುತ್ತಿದೆಯೋ ಗೊತ್ತಿಲ್ಲ, ಇದಕ್ಕೆ ಏನು ಕಾರಣ ಎನ್ನುವುದನ್ನು ತಿಳಿಸಬೇಕು.

ಶ್ರೀ ಜೆ. ಹೆಚ್. ಪಟೇಲ್.—ಯಾವ ಹಿಂದೇಟೂ ಹಾಕಿಲ್ಲ. ಈಗಾಗಲೇ ೨ ಸಾರಿದ ಕೆಳಗೆ ಸರ್ಕಾರ ತೀರ್ಮಾನ ಮಾಡಿದೆ. ಸೋಪ್ಸ್ ಅಂಡ್ ಡಿಟರ್ಜಂಟ್‌ನವರು ಅವರು ಉತ್ಪಾದನೆ ಮಾಡತಕ್ಕಂಥ ವಸ್ತುಗಳನ್ನು ಭಾರತದಲ್ಲೆಲ್ಲಾ ಅವರೇ ಮಾರಾಟ ಮಾಡಿಕೊಳ್ಳುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದೇವೆ. ಅವರಿಗೆ ವಿದೇಶಗಳಲ್ಲಿ ಯಾವುದೇ ವ್ಯವಸ್ಥೆ ಇಲ್ಲದಕಾರಣ ವಿದೇಶೀ ವ್ಯವಹಾರವನ್ನು ಮಾತ್ರ ಎಂ.ಎಸ್.ಐ.ಎಲ್.ನವರು ಮಾಡುತ್ತಾರೆ. ಉಳಿದಿದ್ದನ್ನು ಕೆ.ಎಸ್. ಅಂಡ್ ಡಿ.ಎಲ್.ಗೆ ಕೊಟ್ಟಿದೆ. ಆದುದರಿಂದ ಮಾನ್ಯ ಸದಸ್ಯರ ಕಳಕಳಿ ಏನೂ ಬೇಡ. ಈಗಾಗಲೇ ಈ ಒಂದು ವ್ಯವಸ್ಥೆಯನ್ನು ಕೆ.ಎಸ್. ಅಂಡ್ ಡಿ.ಎಲ್.ಗೆ ಕೊಟ್ಟಿದೆ. ಆಮೇಲೆ ಅದು ಒಂದೇ ಕಾರಣ ಅಲ್ಲ. ಈಗ ಫುಲ್ ಕೆಪಾಸಿಟಿಯಲ್ಲಿ ರನ್ ಮಾಡದೇ ಹೋದರೆ ಪ್ರತಿಯೊಂದು ಸೋಪಿನ ಬೆಲೆ ಜಾಸ್ತಿಯಾಗುತ್ತದೆ. ಆದಕ್ಕೋಸ್ಕರ ಮ್ಯಾನೇಜ್‌ಮೆಂಟ್‌ನವರು ಬಹಳ ತೀಪ್ರವಾಗಿ ಟೋಟಲ್ ಕೆಪಾಸಿಟಿ ಉತ್ಪಾದನೆ ಮಾಡುವುದಕ್ಕೆ ಯೋಚನೆ ಮಾಡುತ್ತಾ ಇದ್ದಾರೆ. ಈಗ ೧೨ ಕೋಟಿ ಬೆಲೆ ಬಾಳತಕ್ಕ ವಸ್ತುಗಳು ಸ್ಟಾಕ್ ಇದೆ ಅಂದರೆ ಇದನ್ನು ಮೊದಲು ಆದಷ್ಟು ಬೇಗ ಕ್ಲಿಯರ್ ಮಾಡಬೇಕು. ಅನಂತರ ಉತ್ಪಾದನೆ ಮತ್ತು ಮಾರಾಟ ಇವೆರಡನ್ನೂ ಬ್ಯಾಲೆನ್ಸ್ ಮಾಡಬೇಕು.

ಶ್ರೀ ಎಂ. ವೀರಯ್ಯಸ್ವಾಮಿ.—ಪೂರ್ತಿ ಕೆಪಾಸಿಟಿ ಉತ್ಪಾದನೆ ಮಾಡಿಕೊಳ್ಳುವುದಕ್ಕೆ ಎಷ್ಟು ದಿವಸ ಆಗುತ್ತದೆ.

ಶ್ರೀ ಜೆ. ಹೆಚ್. ಪಟೇಲ್.—ಮೊದಲು ಬಹಳ ಕಡಿಮೆ ಇತ್ತು. ಬರೀ ೬ ಸಾವಿರ ಟನ್ ಸೋಪ್ ಉತ್ಪಾದನೆ ಮಾಡುತ್ತಿದ್ದರು. ಈಗ ಹನ್ನೆರಡೂವರೆ–ಹದಿಮೂರು ಸಾವಿರ ಟನ್‌ಗೆ ಬಂದಿದ್ದಾರೆ. ಉತ್ಪಾದನೆ ಮಾಡುವುದು ಒಂದೇ ಅಲ್ಲ, ಮಾರ್ಕೆಟಿಂಗ್ ಸ್ಟ್ಯಾಂಡರ್ಡನ್ನೂ ಉಳಿಸಿಕೊಂಡು ಹೋಗಬೇಕು. ಅದಕ್ಕೆ ಪ್ರತಿವರ್ಷ ೧೫–೨೦ ಪರ್ಸೆಂಟ್ ಇಂಪ್ರೂವ್‌ಮೆಂಟ್‌ಗೆ ಮಾಡಬೇಕಾಗಿದೆ. ೪-೫ ವರ್ಷಗಳಲ್ಲಿ ಫುಲ್ ಕೆಪಾಸಿಟಿಯಲ್ಲಿ ರನ್ ಮಾಡುವುದಕ್ಕೆ ಬರಬೇಕು.

ಸಣ್ಣ ಹಿಡುವಳಿದಾರರಿಗೆ ವಿದ್ಯುತ್ ಸರಬರಾಜು

೨೨೬೦. ಶ್ರೀ ರವೀಂದ್ರನಾಥ ಬಾಬು (ಕೊಟ್ಟೂರು):—ಮಾನ್ಯ ವಿದ್ಯುತ್ ಹಾಗೂ ತೋಟಗಾರಿಕೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಒಂದು ಎಕರೆಗೆ ಒಂದು ಹೆಚ್‌ಪಿ ಯಂತೆ ಕನಿಷ್ಠ ೫ ಎಕರೆಗಳ ಮೇಲ್ಪಟ್ಟ ಜಮೀನಿಗೆ ವಿದ್ಯುತ್ ಸರಬರಾಜು ಮಾಡಲು ನಿರ್ಣಯ ತೆಗೆದುಕೊಂಡಿರುವುದು ನಿಜವೆ ?

ಆ) ಈ ನಿರ್ಣಯದಿಂದ ೫ ಎಕರೆಗಳಿಗಿಂತ ಕಡಿಮೆ ಜಮೀನಿರುವ ರೈತನಿಗೆ ತೊಂದರೆ ಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ ?